**01/07/23** ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ- ತಾವು ತಮ್ಮದೇ ತನು-ಮನ-ಧನದಿಂದ ಭಾರತವನ್ನು ಪಾವನ ಮಾಡುವ ಸರ್ವೀಸ್ ಮಾಡಬೇಕು, ಈ ಭಾರತವನ್ನು ಮಾಯಾ ರಾವಣನಿಂದ ಮುಕ್ತ ಮಾಡಬೇಕು"

ಪ್ರಶ್ನೆ: ಯಾವ ಮಕ್ಕಳು ಆತ್ಮಾಭಿಮಾನಿಗಳಾಗುವ ಪುರುಷಾರ್ಥ ಮಾಡುತ್ತಾರೆ ಅವರು ಯಾವ ಚಿಂತೆಯಿಂದ ಮುಕ್ತರಾಗುತ್ತಾರೆ:

ಉತ್ತರ: ಈ ಹಳೆಯ ಶರೀರದ ಯಾವ ಕರ್ಮಭೋಗವು ಪದೇ-ಪದೇ ಭೋಗಿಸುವ ರೂಪದಲ್ಲಿ ಬರುತ್ತದೆ, ಲೆಕ್ಕಾಚಾರವನ್ನು ಸಮಾಪ್ತಿ ಮಾಡಬೇಕಾಗುತ್ತದೆ, ಇದರ ಚಿಂತೆಯಿಂದ ಅವರು ಮುಕ್ತರಾಗುತ್ತಾರೆ. ಏಕೆಂದರೆ ಅವರ ಬುದ್ಧಿಯಲ್ಲಿರುತ್ತದೆ- ಈಗ ನಾವು ಹಳೆಯ ಲೆಕ್ಕಾಚಾರವನ್ನು ಸಮಾಪ್ತಿ ಮಾಡಿ ಕರ್ಮಾತೀತರಾಗಬೇಕು ನಂತರ ಅರ್ಧಕಲ್ಪ ಯಾವುದೇ ಪ್ರಕಾರದ ರೋಗವು ನಮ್ಮ ಬಳಿ ಬರಲು ಸಾಧ್ಯವಿಲ್ಲ. ಬಾಬಾ ಅಂತಹ ಫರ್ಸ್ಟ್ ಕ್ಲಾಸ್ ಪ್ರಕೃತಿ ಚಿಕಿತ್ಸೆಯನ್ನು ಕೊಡುತ್ತಾರೆ. ಅದರಿಂದ ಖಾಯಿಲೆಯ ಹೆಸರು-ಗುರುತೂ ಸಹ ಇರುವುದಿಲ್ಲ.

ಗೀತೆ: ನೀವೇ ಮಾತಾ, ಪಿತಾ ಆಗಿದ್ದೀರಿ......

ಓಂ ಶಾಂತಿ. ಮಕ್ಕಳು ಗೀತೆಯನ್ನು ಕೇಳಿದಿರಾ. ಮಕ್ಕಳಿಗೆ ಗೊತ್ತಿದೆ, ನಾವು ಪತಿತ-ಪಾವನ ಮಾತಾಪಿತರ ಸಮ್ಮುಖದಲ್ಲಿ ಕುಳಿತಿದ್ದೇವೆ. ಪತಿತ ಭಾರತವನ್ನು ಪಾವನ ಮಾಡಲು ಶ್ರೀಮತದಂತೆ ನಡೆಯುತ್ತಿದ್ದೇವೆ ಏಕೆಂದರೆ ತಾವು ಮಕ್ಕಳು ಪರಮಪಿತ ಪರಮಾತ್ಮನ ಸೇವೆಯಲ್ಲಿದ್ದೀರಿ. ತಂದೆಯೂ ಸಹ ಈ ಸೇವೆಯಲ್ಲಿದ್ದಾರೆ. ಭಾರತ ಪಾವನವಾಗಿತ್ತು. ಈಗ ಪತಿತವಾಗಿದೆ ಎಂಬುದು ನೀವು ಮಕ್ಕಳಿಗೆ ಗೊತ್ತಿದೆ. ಪಾವನ ಜಗತ್ತಿಗೆ 5000 ವರ್ಷಗಳಾಗಿದೆ. ಜಗತ್ತು ಈ ಮಾತುಗಳನ್ನು ಸ್ವಲ್ಪವೂ ತಿಳಿದುಕೊಂಡಿಲ್ಲ. ಈಗ ತಾವು ಮಕ್ಕಳು ತಂದೆಯ ಶ್ರೀಮತದಂತೆ ನಡೆದು ತನು-ಮನ-ಧನದಿಂದ ಭಾರತದ ಸೇವೆಯನ್ನು ಮಾಡುತ್ತೀರಿ. ಭಾರತವನ್ನು ಮಾಯಾ ರಾವಣನ ಸರಪಳಿಯಿಂದ ಬಿಡಿಸಿ ರಾಮರಾಜ್ಯ ಸ್ಥಾಪನೆ ಮಾಡುತ್ತಿದ್ದೀರಿ. ಇದಂತೂ ತಾವು ಯಾರಿಗೆ ಬೇಕಾದರೂ ತಿಳಿಸಬಹುದು. ನಾವು ಪತಿತ ಭಾರತವನ್ನು ಪಾವನ ಮಾಡಲು ಬಂದಿದ್ದೇವೆ ಅಂದಮೇಲೆ ಅವಶ್ಯವಾಗಿ ಪವಿತ್ರರಾಗಲೇಬೇಕಲ್ಲವೆ. ಪವಿತ್ರತೆಯ ಮೇಲೆಯೇ ಜಗಳ ನಡೆಯುತ್ತದೆ. ಏನಾದರೊಂದು ತೊಂದರೆಯಾಗುತ್ತದೆ. ಅವರದು ಹಿಂಸಕಯುದ್ಧ, ನಿಮ್ಮದು 5 ವಿಕಾರಗಳೆಂಬ ರಾವಣನ ಜೊತೆ ಯುದ್ಧವಾಗಿದೆ. ಕಲ್ಪ-ಕಲ್ಪವೂ ನಾವು ಶ್ರೀಮತದಂತೆ ನಡೆಯುತ್ತೇವೆ ಎಂಬುದು ನಿಮಗೆ ಗೊತ್ತಿದೆ. ಶ್ರೀಮತದಿಂದ ತಾವು ದೈವೀ ಮತದವರು ದೇವತೆಗಳಾಗುತ್ತೀರಿ. ಈಗ ತಾವು ಬ್ರಾಹ್ಮಣ ವರ್ಣದವರಾಗಿದ್ದೀರಿ. ತಾವು ಪೂರ್ಣ ಜಗತ್ತನ್ನು ಪಾವನ ಮಾಡುತ್ತೀರಿ. ಬೇಹದ್ದಿನ ತಂದೆಯು ಮಕ್ಕಳ ಬಳಿ ಬರುತ್ತಾರೆ. ಮಕ್ಕಳು ಹೇಳುತ್ತಾರೆ- ನಾವು ತನು-ಮನ-ಧನದಿಂದ ಭಾರತವನ್ನು ಮತ್ತೆ ದೈವೀರಾಜ್ಯವನ್ನಾಗಿ ಮಾಡುತ್ತೇವೆ ಏಕೆಂದರೆ ಭಾರತ ಸತ್ಯಯುಗದ ಆದಿಯಲ್ಲಿ ಪಾವನ ರಾಜಾಸ್ಥಾನವಾಗಿತ್ತು. ನಾವು ನಮ್ಮ ದೈವೀರಾಜ್ಯವನ್ನು ಸ್ಥಾಪನೆ ಮಾಡುತ್ತಿದ್ದೇವೆ. ಹೇಗೆ ಕಾಂಗ್ರೆಸ್ಸ್ ಒಂದಾಗಿ ಸಹಯೋಗ ಕೊಟ್ಟರಲ್ಲವೆ. ಬಾಪು ಗಾಂಧೀಜಿ ಸಹ ತನು-ಮನ-ಧನದಿಂದ ಸೇವೆ ಮಾಡಿದರು. ಜೈಲಿಗೂ ಸಹ ಹೋಗಬೇಕಾಯಿತು ಅಂದಮೇಲೆ ತನುವಿನ ಸೇವೆಯಾಯಿತಲ್ಲವೆ. ಮನಸ್ಸೂ ಸಹ ಅದರಲ್ಲಿಯೇ ತೊಡಗಿತ್ತು. ಈಗ ತಮಗೆ ಗೊತ್ತಿದೆ, ತಂದೆಯು ಮಾಯಾ ರಾವಣನಿಂದ ಬಿಡುಗಡೆ ಮಾಡುತ್ತಾರೆ. ಇವರು ಪಾರಲೌಕಿಕ ತಂದೆ, ಅವರು ಭಾರತದ ಬಾಪೂಜಿಯಾಗಿದ್ದರು. ಎಲ್ಲರಿಗೂ ಅಲ್ಲ. ಹಾಗೆ ನೋಡಿದರೆ ವೃದ್ಧರಿಗೂ ಬಾಪೂಜಿ ಎಂದು ಹೇಳುತ್ತಾರೆ, ಮೇಯರ್ಗೂ ಸಹ ಬಾಪೂಜಿ ಎನ್ನುತ್ತಾರೆ. ಅನೇಕ ತಂದೆಯರಿದ್ದಾರೆ. ನಮ್ಮ ತಂದೆ ಒಬ್ಬರೇ ಆಗಿದ್ದಾರೆ, ಇನ್ನೊಬ್ಬರಿಲ್ಲ. ಬೇಹದ್ದಿನ ತಂದೆಯು ಒಬ್ಬರೇ ಶಿವತಂದೆಯಾಗಿದ್ದಾರೆ, ಅವರು ಭಾರತವನ್ನು ಪಾವನ ಮಾಡುವ ಸೇವೆಯಲ್ಲಿ ಉಪಸ್ಥಿತರಾಗಿದ್ದಾರೆ. ಅವಶ್ಯವಾಗಿ ಯಾವುದೋ ಶರೀರದಲ್ಲಿ ಬಂದಿರಬೇಕು. ಜೊತೆಯಲ್ಲಿ ಸಹಯೋಗಿಗಳೂ ಇರಬೇಕು. ಒಬ್ಬರೇ ಇರುವುದಿಲ್ಲ. ನೀವು ಶಿವಶಕ್ತಿ ಸೇನೆ ಆಗಿದ್ದೀರಿ. ನಿಮಗೆ ತಿಳಿಸಲು ಬಹಳ ಸಹಜವಾಗಿದೆ. ಕಾಂಗ್ರೆಸ್ಸನವರು ಸಹ ಎಷ್ಟೊಂದು ಸಹನೆ ಮಾಡಿದರು, ಅಬಲೆಯರೂ ಸಹ ಜೈಲಿಗೆ ಹೋದರು. ಹೆಚ್ಚು ದುಃಖವನ್ನು ಅನುಭವಿಸಿದರು. ಈಗ ಮತ್ತೆ ತಾವು ಮಾತೆಯರು ವಿಷದ (ವಿಕಾರದ) ಕಾರಣದಿಂದ ಬಹಳ ದುಃಖವನ್ನು ಸಹನೆ ಮಾಡಬೇಕಾಗುತ್ತದೆ. ತಂದೆಯು ಹೊಸಸೃಷ್ಟಿಯನ್ನು ರಚಿಸಲು ಬಂದಿದ್ದಾರೆಂದು ತಾವು ತಿಳಿಸಬಹುದು. ಮೊಟ್ಟಮೊದಲು ಬ್ರಾಹ್ಮಣರು ಬೇಕು. ಬ್ರಹ್ಮಾಮುಖವಂಶಾವಳಿ ಬ್ರಾಹ್ಮಣರು ಪುನಃ ತಾವೇ ದೈವೀ ಅಂದರೆ ವಿಷ್ಣುವಿನ ವಂಶದವರಾಗುತ್ತೀರಿ. ಅವಶ್ಯವಾಗಿ ನಾವು ತಂದೆಯ ಜೊತೆ ಸಹಯೋಗಿಗಳಾಗಿದ್ದೇವೆ ಎಂಬುದು ಬುದ್ಧಿಯಲ್ಲಿರಬೇಕು. ಶ್ರೀಮತದಂತೆ ಸಾವಿರಾರು ಲಕ್ಷಾಂತರ ಜನರು ನಡೆಯಬೇಕಾಗುತ್ತದೆ. ಬಾಪೂಜಿ ಜೊತೆಯಲ್ಲಿಯೂ ಸಹ ಬಹಳ ದೊಡ್ಡಸೇನೆಯಿತ್ತು. ಅವರಲ್ಲಿಯೂ ಕೆಲವರು ಬಹಳ ಪ್ರಸಿದ್ಧವಾಗಿದ್ದರು. ಆ ಬಾಪೂಜಿಯು ಬ್ರಿಟೀಷರಿಂದ ಬಿಡಿಸಿದರು. ಈಗ ತಾವು ಮಕ್ಕಳಿಗೆ ರಾವಣ ಶತ್ರುವಿನಿಂದ ಬಿಡಿಸಲು ಶ್ರೀಮತವನ್ನು ಕೊಡುತ್ತಿದ್ದಾರೆ. ನಾವು ಸ್ವರಾಜ್ಯ ಸ್ಥಾಪನೆ ಮಾಡುತ್ತಿದ್ದೇವೆಂದು ಅವರೂ ಸಹ ಹೇಳುತ್ತಿದ್ದರು. ಹಾಗೆಯೇ ನಾವೂ ಸಹ ಶ್ರೀಮತದಂತೆ ದೈವೀ ಸ್ವರಾಜ್ಯವನ್ನು ಸ್ಥಾಪನೆ ಮಾಡುತ್ತಿದ್ದೇವೆಂಬುದು ಬುದ್ಧಿಯಲ್ಲಿದೆ. ಹೆಜ್ಜೆ-ಹೆಜ್ಜೆಯಲ್ಲಿ ಶ್ರೀಮತವನ್ನು ಪಡೆಯಬೇಕಾಗುತ್ತದೆ. ಶ್ರೀಮತದಿಂದ ಶ್ರೇಷ್ಠರಾಗುತ್ತೀರಿ. ಪ್ರತಿಯೊಬ್ಬರ

ಕರ್ಮಬಂಧನ ತಮ್ಮ-ತಮ್ಮದೇ ಆಗಿದೆ. ಕರ್ಮಾತೀತ ಸ್ಥಿತಿಯನ್ನು ಪಡೆಯಲು ಅಂತ್ಯದವರೆಗೂ ಪುರುಷಾರ್ಥ ಮಾಡಬೇಕಾಗಿದೆ. ಇನ್ನೂ ಆ ಸ್ಥಿತಿ ಬಂದಿಲ್ಲ. ಇನ್ನೂ ಬಹಳ ಪುರುಷಾರ್ಥವನ್ನು ಮಾಡಬೇಕು. ಶರೀರಕ್ಕೂ ಯಾವುದೇ ದುಃಖವಾಗಬಾರದು ಇದಕ್ಕೆ ಕರ್ಮಾತೀತ ಸ್ಥಿತಿ ಎಂದು ಹೇಳಬಹುದು. ಹಳೆಯ ಶರೀರಕ್ಕೆ ಅಂತ್ಯದವರೆಗೂ ದುಃಖವಾಗುತ್ತಲೇ ಇರುತ್ತದೆ. ಎಲ್ಲರೂ ಸಂಪೂರ್ಣವಾಗಿದ್ದಾರೆ ಎಂದಲ್ಲ. ಕರ್ಮಭೋಗವನ್ನು ಸಮಾಪ್ತಿ ಮಾಡಲೇಬೇಕು. ಕರ್ಮಾತೀತರಾಗುವವರೆಗೂ ಮಾಯೆಯ ಬಿರುಗಾಳಿ, ಕರ್ಮಗಳ ಲೆಕ್ಕಾಚಾರವನ್ನು ಅನುಭವಿಸಲೇಬೇಕಾಗಿದೆ. ಅದರ ಚಿಂತೆ ಮಾಡಬಾರದು. ತಂದೆಯನ್ನು ನೆನಪು ಮಾಡಬೇಕು. ತಂದೆಯು ತಿಳಿಸುತ್ತಾರೆ- ಆತ್ಮಾಭಿಮಾನಿಭವ. ಇದು ಈ ಸಮಯದ ಅಕ್ಷರವಾಗಿದೆ. ಮನುಷ್ಯರಿಗೆ ಇದರ ಅರ್ಥವು ತಿಳಿದಿಲ್ಲ. ಈಗ ತಮಗೆ ಗೊತ್ತಿದೆ- ಆತ್ಮಾಭಿಮಾನಿಯಾಗುವುದರಿಂದ ನಾವು ಒಂಟಿಯಾಗಿ ತಂದೆಯನ್ನು ನೆನಪು ಮಾಡಬಹುದು. ಈಗ ಆತ್ಮಾಭಿಮಾನಿಯಾಗಬೇಕು. ನಾನು ಆತ್ಮನಾಗಿದ್ದೇನೆ, ನಾನು ತಂದೆಯನ್ನು ನೆನಪು ಮಾಡುತ್ತೇನೆ- ಈ ಪುರುಷಾರ್ಥವನ್ನು ಮಾಡಬೇಕು. ಸರ್ವವ್ಯಾಪಿ ಎಂದು ಹೇಳಿದರೆ ತಾವು ಯಾರನ್ನು ನೆನಪು ಮಾಡುವುದು? ತಂದೆಯು ತಿಳಿಸಿದ್ದಾರೆ- ಶಾಂತಿಗಾಗಿ ತಾವು ಎಲ್ಲಿಗೋ ಹೋಗಬೇಕಾಗಿಲ್ಲ. ಕರ್ಮವನ್ನಂತೂ ಮಾಡಲೇಬೇಕಾಗಿದೆ. ಅಶರೀರಿಗಳಾಗಿರಬೇಕು. ಆತ್ಮದ ಸ್ವಧರ್ಮವೇ ಶಾಂತಿಯಾಗಿದೆ. ಆ ಸನ್ಯಾಸಿಗಳು ಹಠಯೋಗ ಮಾಡುತ್ತಾರೆ, ಪ್ರಾಣಾಯಾಮವನ್ನು ಮಾಡುತ್ತಾರೆ ಮತ್ತೆ ಅಭ್ಯಾಸ ಮಾಡುತ್ತಾರೆ, ಹಳ್ಳದಲ್ಲಿ ಹೋಗಿ ಅನೇಕ ಪ್ರಯತ್ನಪಡುತ್ತಾರೆ. ಇಲ್ಲಿ ಹಠಯೋಗದ ಮಾತಿಲ್ಲ. ಕೇವಲ ಜ್ಞಾನವನ್ನು ತಿಳಿಸಲಾಗುತ್ತದೆ. ಪರಮಾತ್ಮನ ಪರಿಚಯವನ್ನು ಯಾರೂ ತಿಳಿದುಕೊಂಡಿಲ್ಲದೆ ಪರಮಾತ್ಮ ಸರ್ವವ್ಯಾಪಿ ಎಂದು ಹೇಳಿಬಿಡುತ್ತಾರೆ, ಅದಕ್ಕೆ ಮಿತ್ಯಜ್ಞಾನವೆಂದು ಹೇಳಲಾಗುತ್ತದೆ. ಸರ್ವರ ತಂದೆ ಒಬ್ಬರೇ ಆಗಿದ್ದಾರೆ. ಅವರೇ ಬಂದು ಸೃಷ್ಟಿಯನ್ನು ಪಾವನ ಮಾಡುತ್ತಾರೆ. ತಾವು ತಂದೆಯ ಜೊತೆ ಸಹಯೋಗಿಗಳಾಗಿದ್ದೀರಿ. ಪತಿತರಿಂದ ಪಾವನರಾಗಿ ನಂತರ ಪಾವನ ಜಗತ್ತಿನಲ್ಲಿ ಹೋಗುತ್ತೀರಿ. ಅಲ್ಲಿ ಪಾವನ ದೈವೀಜಗತ್ತು ಇರುತ್ತದೆ. ಪಾವನ ಜಗತ್ತಿಗಾಗಿ ತಾವು ರಾಜಯೋಗವನ್ನು ಕಲಿಯುತ್ತಿದ್ದೀರಿ. ಮತ್ತೆ ಶಿಕ್ಷಕರಾಗಿ ತಮಗೆ ಸೃಷ್ಟಿಚಕ್ರದ ಜ್ಞಾನವನ್ನು ಕೊಡುತ್ತಾರೆ. ಇದರಿಂದ ತಾವು ಸ್ವದರ್ಶನ ಚಕ್ರಧಾರಿಗಳಾಗಿ ಚಕ್ರವರ್ತಿ ರಾಜಾ-ರಾಣಿಯರಾಗುತ್ತೀರಿ. ಗೃಹಸ್ಥ ವ್ಯವಹಾರದಲ್ಲಿರುತ್ತಾ ಈ ಸ್ಥಿತಿಯನ್ನು ಜಮಾ ಮಾಡಿಕೊಳ್ಳಬೇಕು. ತಾವು ಎಷ್ಟು ಸಹನೆ ಮಾಡಬೇಕಾಗುತ್ತದೆ. ಮಾತೆಯರು ಪೆಟ್ಟನ್ನು ತಿನ್ನಬೇಕಾಗುತ್ತದೆ, ಈ ಯಜ್ಞದಲ್ಲಿ ಎಷ್ಟೊಂದು ವಿಘ್ನಗಳು ಬರುತ್ತವೆ. ವಿಕಾರಗಳ ಕಾರಣದಿಂದ ಅಬಲೆಯರ ಮೇಲೆ ಅತ್ಯಾಚಾರವಾಗುತ್ತದೆ. ಕಾಂಗ್ರೆಸ್ಸಿನವರು ಆ ಜೈಲಿಗೆ ಹೋಗುತ್ತಿದ್ದರು. ತಾವು ಕಂಸ, ಜರಾಸಂಧರ ಜೈಲಿನಲ್ಲಿ ಬಂಧಿತರಾಗುತ್ತೀರಿ. ಸ್ವಲ್ಪ ಸಹನೆ ಮಾಡಬೇಕಾಗುತ್ತದೆ. ಪಾವನರು ಮೆಜಾರಿಟಿ ತಾವೇ ಆಗುತ್ತೀರಿ. ಕೆಲವರು ಬಲಹೀನ ಪುರುಷರು ಸ್ತ್ರೀಯ ಕಾರಣದಿಂದ ಸಹನೆ ಮಾಡಬೇಕಾಗುತ್ತದೆ. ಭಾರತವಾಸಿಗಳ ಕಾಯಿದೆ ಇದೆ- 60 ವರ್ಷಗಳ ನಂತರ ವಾನಪ್ರಸ್ಥ ಸ್ಥಿತಿಯನ್ನು ಧಾರಣೆ ಮಾಡಿಕೊಳ್ಳುವುದು, ಗೃಹಸ್ಥವನ್ನು ಬಿಟ್ಟು ಮಕ್ಕಳಿಗೆ ಸಂಭಾಲನೆ ಮಾಡಲು ಹೇಳಿ ಬೀಗದ ಕೈಯನ್ನು ಕೊಟ್ಟುಬಿಡುತ್ತಾರೆ. ಸುಪುತ್ರರು ಚೆನ್ನಾಗಿ ಸಂಭಾಲನೆ ಮಾಡುತ್ತಾರೆ. ತಂದೆಯು ಸೇವೆಯನ್ನು ಮಾಡಿ ದೊಡ್ಡವರನ್ನಾಗಿ ಮಾಡಿದ್ದಾರೆ ನಂತರ ಸಂಭಾಲನೆ ಮಾಡುವುದು ಮಕ್ಕಳ ಕರ್ತವ್ಯವಾಗಿದೆ. ನೀವು ಸತ್ಸಂಗ ಇತ್ಯಾದಿಗಳಲ್ಲಿ ಭಾಗವಹಿಸಿ ನಾವು ಸಂಭಾಲನೆ ಮಾಡುತ್ತಿರುತ್ತೇವೆ ಎಂದು ಹೇಳುತ್ತಾರೆ. ಈಗಿನ ಕಾಲದಲ್ಲಿ ಮಕ್ಕಳೂ ಸಹ ಶತ್ರುವಿನ ಸಮಾನರಾಗಿದ್ದಾರೆ. ತಮ್ಮ ಯುದ್ಧ ರಾವಣನ ಜೊತೆಯಿದೆ. ಅವರು ಗಾಂಧೀಜಿಯ ಮತದಂತೆ ಬ್ರಿಟಿಷರಿಂದ ಬಿಡುಗಡೆ ಹೊಂದಿದರು.

ತಮ್ಮ ಮೇಲೆ ಮಾಯೆಯು 2500 ವರ್ಷ ರಾಜ್ಯ ಮಾಡಿದೆ. ಈ ಮಾಯೆಯು ಬಹಳ ಬಲಶಾಲಿಯಾಗಿದೆ. ಇದನ್ನು ಬಿಡಿಸಲು 40-50 ವರ್ಷಗಳು ಬೇಕಾಯಿತು. ಶ್ರಮಪಡಬೇಕಾಯಿತು. ಇಲ್ಲಿಯೂ ಸಹ ಸಮಯ ಬೇಕಾಗುತ್ತದೆ. ತಾವು ಶ್ರೀಮತದಿಂದ ವಿಜಯ ಗಳಿಸಿದ್ದೀರಿ. ಮಾಯೆಯು ನಿಮ್ಮ ಬಹಳ ಹಳೆಯ ಶತ್ರುವಾಗಿದೆ. ತಮಗೆ ಮಾಯಾ ಶತ್ರುವಿನ ಗುಂಡು ಬೀಳುತ್ತದೆ. ಎಲ್ಲದಕ್ಕಿಂತ ದೊಡ್ಡ ಬಾಂಬು ಕಾಮವಿಕಾರದ್ದಾಗಿದೆ. ಮಾಯೆಯಿಂದ ಬಹಳ ಎಚ್ಚರವಾಗಿರಬೇಕು. ತಂದೆಯು ತಿಳಿಸುತ್ತಾರೆ- ತಾವು ಎಷ್ಟು ನೆನಪು ಮಾಡುತ್ತೀರೋ ಅಷ್ಟು ಖುಷಿಯ ನಶೆಯೇರುತ್ತದೆ. ನಾವು ಈಶ್ವರನ ಸಂತಾನರಾಗಿದ್ದೇವೆ ಎಂಬುದು ನಿಮಗೆ ಗೊತ್ತಿದೆ. ಶ್ರೀಮತದಿಂದ 21 ಜನ್ಮಗಳಿಗಾಗಿ ಸ್ವರಾಜ್ಯವನ್ನು ಸ್ಥಾಪನೆ ಮಾಡುತ್ತೀರಿ. ಕಾಂಗ್ರೆಸ್ಸಿನವರು ಅಲ್ಪಕಾಲಕ್ಕಾಗಿ ಸ್ವರಾಜ್ಯವನ್ನು ಪಡೆದರು. ಅದ್ಯಾವುದೇ ಸ್ವರಾಜ್ಯವಲ್ಲ..... ಆದರೆ ನಿಮಗೆ ಗೊತ್ತಿದೆ ಮರೀಚಿಕೆಯ ಸಮಾನ ರಾಜ್ಯ ಸಿಕ್ಕಿದೆ. ಕಾಂಗ್ರೆಸ್ ಹೇಗಾಯಿತು- ಇದು ಯಾವುದೇ ಗೀತಾ-ಭಾಗವತದಲ್ಲಿಲ್ಲ. ಈಗ ನಿಮಗೆ ಗೊತ್ತಿದೆ- ಅವರಿಗಂತೂ ಏನೂ ಸಿಗಲಿಲ್ಲ. ಎಂ.ಪಿ., ಇತ್ಯಾದಿ ಆದರು ಅಷ್ಟೇ. ಅದೂ ಸಹ ಅಲ್ಪಕಾಲಕ್ಕಾಗಿ. ಈಗಂತೂ ಎಲ್ಲರೂ ದುಃಖಿಗಳಾಗಿದ್ದಾರೆ. ನಾವು ಸ್ವರ್ಗದ ಸ್ಥಾಪನೆ ಮಾಡುತ್ತಿದ್ದೇವೆ. ಡ್ರಾಮಾದಲ್ಲಿ ವಿಜಯವಂತೂ ನಿಮ್ಮದೇ ಆಗಿದೆ. ತಾವು ರಾಜಯೋಗವನ್ನು ಕಲಿಯುತ್ತಿದ್ದೀರಿ. ನಾವು ಸೂರ್ಯವಂಶದವರಾಗುತ್ತಿದ್ದೇವೆ ಎಂಬುದು ಗೊತ್ತಿದೆ. ತಂದೆಯು ಕೇಳುತ್ತಾರೆ- ತಾವು ಪುರುಷಾರ್ಥವನ್ನು ಸೂರ್ಯವಂಶಿಗಳಾಗಲು ಮಾಡುತ್ತೀರೋ ಅಥವಾ ಚಂದ್ರವಂಶಿಗಳಾಗಲು ಮಾಡುತ್ತೀರೋ? ಆಗ ಹೇಳುತ್ತಾರೆ- ನಾವು ಸೂರ್ಯವಂಶಿಗಳಾಗಲು ಪುರುಷಾರ್ಥ ಮಾಡುತ್ತಿದ್ದೇವೆ. ಇದಕ್ಕೆ ಹೇಳಲಾಗುತ್ತದೆ- ಮಾತಾಪಿತರನ್ನು ಅನುಸರಿಸುವುದು. ಮಾತಾಪಿತರಿದ್ದಾರಲ್ಲವೆ. ಇವರು ಸೂರ್ಯವಂಶೀ ಮಹಾರಾಜ-ಮಹಾರಾಣಿ ಆಗುತ್ತಾರೆ. ಇದು ಎಲ್ಲರಿಗೂ 100% ನಿಶ್ಚಯವಿದೆ. ಮಾತಾಪಿತರು ಮಕ್ಕಳಿಗೆ ಹೇಳುತ್ತಾರೆ- ತಾವೂ ಸಹ ಪುರುಷಾರ್ಥ ಮಾಡಿ ಸಿಂಹಾಸನಾರೂಢರಾಗಬೇಕು. ಪುರುಷಾರ್ಥ ಮಾಡಿ ಅನುಸರಿಸಬೇಕು. ಕೆಲವರು ಶುಭವನ್ನು ನುಡಿದಾಗ ಹೇಳಲಾಗುತ್ತದೆ-ನಿಮ್ಮ ಬಾಯಿ ಸಿಹಿಯಾಗಲಿ. ಅರೆ!

ಸೂರ್ಯವಂಶಿಗಳಾಗುವುದು ಕಡಿಮೆ ಮಾತೇನು! ಎಷ್ಟು ವಜ್ರವೈಡೂರ್ಯಗಳಿಂದ ಮಾಡಿದ ಮಹಲು ಇರುತ್ತದೆ. ಎಷ್ಟು ಶ್ರೇಷ್ಠಪದವಿಯಿದೆ! ವಿಚಾರ ಮಾಡಿದರೆ ರೋಮಾಂಚನವಾಗುತ್ತದೆ. ಬಾಬ ನಮ್ಮನ್ನು ಎಷ್ಟು ಶ್ರೇಷ್ಠರನ್ನಾಗಿ ಮಾಡುತ್ತಾರೆ. ನಮಗೆ ಏನೂ ತಿಳಿದಿರಲಿಲ್ಲ. ಹಳ್ಳಿಯ ಬಾಲಕ ಎಂದು ಗಾಯನವಿದೆಯಲ್ಲವೆ. ಕೃಷ್ಣನು ಯಾವುದೇ ಹಳ್ಳಿಯ ಬಾಲಕನಾಗಿರಲಿಲ್ಲ. ಇಲ್ಲಿ ಹಳ್ಳಿಯವರು ಎಷ್ಟು ಜನ ಬಂದಿದ್ದೀರಿ! ಬಡವರದೇ ಸೌಭಾಗ್ಯ. ಶ್ರೀಮಂತರಿಗೆ ಹೃದಯಘಾತವಾಗುತ್ತದೆ. ತಂದೆಯು ಹೇಳುತ್ತಾರೆ- ನಾನು ಬಡವರ ಬಂಧುವಾಗಿದ್ದೇನೆ. ಯಾರ್ಯಾರು ಆಸ್ತಿಯನ್ನು ಪಡೆಯಲು ಬರುತ್ತಾರೆ ಎಂಬುದನ್ನು ನೋಡುತ್ತೀರಿ. ಯಾರೇ ಸಿಕ್ಕಿದರೂ ಸಹ ಹೇಳಿ ನಾವು ಭಾರತದ ಸೇವೆಯಲ್ಲಿದ್ದೇವೆ. ತನು-ಮನ-ಧನದಿಂದ ಭಾರತವನ್ನು ಸ್ವರ್ಗವನ್ನಾಗಿ ಮಾಡುವ ಸೇವೆ ಮಾಡುತ್ತೇವೆ. ಯಾರಾದರೂ ಆದಾಯ ತೆರಿಗೆಯ ಅಧಿಕಾರಿ ಇದ್ದರೆ ತಮ್ಮನ್ನು ತಕ್ಷಣ ಬಿಟ್ಟುಬಿಡುತ್ತಾರೆ. ಆ ಸರ್ಕಾರದ ಬಳಿ ಬಹಳ ಹಣವು ನಷ್ಟವಾಗುತ್ತದೆ. ತಮ್ಮ ಹಣ ಭಾರತವನ್ನು ಉತ್ತಮ ಮಾಡುತ್ತದೆ. ಎಷ್ಟೊಂದು ವ್ಯತ್ಯಾಸವಿದೆ! ಯಾರಿಗಾದರೂ ತಿಳಿಸಿದಾಗ ಅವರು ಆಶ್ಚರ್ಯಚಕಿತರಾಗುತ್ತಾರೆ- ಓಹೋ! ಇವರು ಬಹಳ ದೊಡ್ಡ ಸರ್ವೀಸ್ ಮಾಡುತ್ತಿದ್ದಾರೆ ಎನ್ನುವ ರೀತಿ ಸರ್ವೀಸ್ ಮಾಡಿ. ಬಹಳ-ಬಹಳ ಮಧುರರಾಗಿ. ಸತ್ಯಸಾಹೇಬನ ಜೊತೆ ಸತ್ಯವಾಗಿರಬೇಕು. ಸತ್ಯಸಾಹೇಬನ ನೆನಪೂ ಸಹ ಇರಬೇಕು. ಒಂದುವೇಳೆ ಸತ್ಯಖಂಡದ ಮಾಲೀಕರಾಗಬೇಕಾದರೆ ಸತ್ಯಬಾಬಾನನ್ನು ನಿರಂತರವಾಗಿ ನೆನಪು ಮಾಡುವ ಅಭ್ಯಾಸ ಮಾಡಿ. ಸ್ಮರಿಸಿ-ಸ್ಮರಿಸಿ ಸುಖವನ್ನು ಪಡೆಯಿರಿ. ಯಾರಿಗೂ ಯಾವುದೇ ಕಲಹ-ಕ್ಲೇಷಗಳು ಇಲ್ಲ- ಈ ರೀತಿ ಯಾರೂ ಇಲ್ಲ. ಏನಾದರೂ ಒಂದು ಕಾಯಿಲೆ ಇತ್ಯಾದಿ ಆಗುತ್ತಲೇ ಇರುತ್ತದೆ. ಅಲ್ಲಿ ನಿಮಗೆ ಏನೂ ಇರುವುದಿಲ್ಲ. ತಂದೆಯು ಆ ರೀತಿ ಪ್ರಕೃತಿ ಚಿಕಿತ್ಸೆಯನ್ನು ಮಾಡುತ್ತಾರೆ ಇದರಿಂದ ತಾವು ಎಂದೂ ರೋಗಿಗಳಾಗುವುದಿಲ್ಲ. 21 ಜನ್ಮಗಳು ತಾವು ನಿರೋಗಿಗಳಾಗುತ್ತೀರಿ. ಅಂದಮೇಲೆ ಎಷ್ಟು ನಶೆಯಲ್ಲಿರಬೇಕು. ಆ ಬಾಪೂಜಿ ಏನು ಮಾಡಿದರು, ಈ ಬೇಹದ್ದಿನ ಬಾಪೂಜಿ ಏನು ಮಾಡುತ್ತಾರೆ? ಇದರ ವ್ಯತ್ಯಾಸವನ್ನು ತಿಳಿಸಿ. ತಂದೆಯು ತಮ್ಮನ್ನು ರಾವಣನ ಸರಪಳಿಯಿಂದ ಬಿಡಿಸುತ್ತಾರೆ. ಆ ತಂದೆಯನ್ನು ನೆನಪು ಮಾಡುವುದರಿಂದ ತಮ್ಮ ವಿಕರ್ಮ ವಿನಾಶವಾಗುತ್ತದೆ. ಅವರು ತಂದೆಯೂ ಆಗಿದ್ದಾರೆ, ಶಿಕ್ಷಕನೂ ಆಗಿದ್ದಾರೆ, ಸದ್ಗುರುವೂ ಆಗಿದ್ದಾರೆ. ಜನ್ಮ-ಜನ್ಮಾಂತರದ ಪಾಪವು ತಲೆಯ ಮೇಲಿದೆ. ಅದರಿಂದ ಪಾವನರಾಗುವ ಉಪಾಯ ಒಂದೇ ಆಗಿದೆ. ಆ ನೀರಿನ ಗಂಗೆ ಯಾರನ್ನೂ ಪಾವನ ಮಾಡಲು ಸಾಧ್ಯವಿಲ. ಈ ತಂದೆಯ ನೆನಪೇ ಪಾವನ ಮಾಡುತ್ತದೆ. ಒಂದೇಕಡೆ ಕುಳಿತುಕೊಳ್ಳಬೇಕೆಂದಿಲ್ಲ. ಆದರೆ ಕುಳಿತುಕೊಳ್ಳುವುದು ಒಳ್ಳೆಯದೇ. ಒಬ್ಬರಿಗೊಬ್ಬರ ಬಲಕೊಟ್ಟು ಕುಳಿತುಕೊಳ್ಳುತ್ತೀರಿ ಆದರೆ ತಂದೆಯು ತಿಳಿಸುತ್ತಾರೆ- ಹೇಗಾದರೂ ಕುಳಿತುಕೊಳ್ಳಿ ನೆನಪು ಮಾತ್ರ ನಡೆಯುತ್ತಾ-ತಿರುಗಾಡುತ್ತಾ ಕಾರ್ಯ ಮಾಡುತ್ತಾ ಮಾಡಬೇಕು. ಆ ಶಾಲೆಯಲ್ಲಿ ಶಿಕ್ಷಕರು ಓದಿಸುತ್ತಾರೆ ಅಂದಾಗ ವಿದ್ಯಾರ್ಥಿ ಶಿಕ್ಷಕರನ್ನು ಅವಶ್ಯವಾಗಿ ನೆನಪು ಮಾಡಬೇಕಾಗುತ್ತದೆ. ನಮಗೆ ತಂದೆಯು ಓದಿಸುತ್ತಾರೆ ಎಂಬುದು ಮಕ್ಕಳ ಬುದ್ಧಿಯಲ್ಲಿ ಕುಳಿತುಕೊಳ್ಳಬೇಕು. ತಂದೆ, ಶಿಕ್ಷಕನನ್ನು ನೆನಪು ಮಾಡದಿರುವವರು ಯಾರೂ ಇಲ್ಲ. ತಮಗೆ ಗೊತ್ತಿದೆ- ನಾವು ಹಿಂತಿರುಗಿ ಹೋಗಬೇಕು ಅಂದಮೇಲೆ ಸದ್ಗುರುವನ್ನೂ ನೆನಪು ಮಾಡಲೇಬೇಕಾಗಿದೆ. ತಾವು ಅದ್ಭುತ ವಿಚಾರಗಳನ್ನು ಹೇಳುತ್ತೀರಿ. ನಮ್ಮ ತಂದೆ, ಶಿಕ್ಷಕ, ಸದ್ಗುರು- ಸತ್ಯತಂದೆ, ಸತ್ಯಶಿಕ್ಷಕ, ಸತ್ಯಗುರುವಾಗಿದ್ದಾರೆ. ಸತ್ಸಂಗವೇ ಬೆಳಗಿಸುತ್ತದೆ ಅಂದರೆ ಮುಕ್ತಿ-ಜೀವನ್ಮುಕ್ತಿಯಲ್ಲಿ ಕರೆದೊಯ್ಯುತ್ತದೆ. ಈ ಹಳೆಯ ಜಗತ್ತಿನಿಂದ ಎಲ್ಲರೂ ಹಿಂತಿರುಗುತ್ತಾರೆ ಮತ್ತೆ ಬಂದು ಹೊಸಜಗತ್ತಿನಲ್ಲಿ ರಾಜ್ಯ ಮಾಡುತ್ತಾರೆ. ಇದು ರೇಸ್, ಬೇಹದ್ದಿನ ಕುದುರೆಯ ಸ್ಪರ್ಧೆಯಾಗಿದೆ. ನಾವು ಮೊದಲು ತಲುಪಬೇಕು ಎಂದು ಎಲ್ಲರೂ ಹೇಳುತ್ತಾರೆ. ಎಂದಮೇಲೆ ನೆನಪು ಮಾಡಬೇಕಾಗುತ್ತದೆ. ವಿದ್ಯಾರ್ಥಿಗಳನ್ನು ಓಡಿಸಲಾಗುತ್ತದೆ. ಎಷ್ಟು ಪುರುಷಾರ್ಥ ಮಾಡುತ್ತೀರೋ ಅಷ್ಟು ವಿಜಯಮಾಲೆಯಲ್ಲಿ ಪೋಣಿಸಲ್ಪಡುತ್ತೀರಿ. ಒಳ್ಳೆಯದು.

ಮಾತಾಪಿತ ಬಾಪ್ದಾದಾರವರ ಮಧುರಾತಿ ಮಧುರ ಅಗಲಿ ಸಿಕ್ಕಿರುವಂತಹ ಮಕ್ಕಳ ಪ್ರತಿ ಮನಃಪೂರ್ವಕವಾಗಿ ಪ್ರೀತಿಯ ಸವಿನೆನಪುಗಳು. ತಾವು ಬಹಳ ಪ್ರಿಯರಾಗುತ್ತೀರಿ. ನಾವೇ ಪೂಜ್ಯ ದೇವಿ-ದೇವತೆಗಳಾಗಿದ್ದೆವು ಮತ್ತೆ ನಾವೇ ಪೂಜ್ಯರು. ಎರಡು ಕಲೆ ಕಡಿಮೆಯಾಗಿ ಕ್ಷತ್ರಿಯ, ಚಂದ್ರವಂಶಿಯರಾದೆವು ಮತ್ತೆ ನಾವೇ ಪೂಜಾರಿ, ವೈಶ್ಯವಂಶಿ, ಶೂದ್ರವಂಶಿಯರಾದೆವು. ಈಗ ಮತ್ತೆ ನಾವು ಪೂಜಾರಿಯಿಂದ ಶ್ರೀಮತದಂತೆ ಪೂಜ್ಯರಾಗುತ್ತಿದ್ದೇವೆ. ಈ ಚಕ್ರವನ್ನು ಬುದ್ಧಿಯಲ್ಲಿ ತಿರುಗಿಸಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಭಾರತವನ್ನು ಶ್ರೇಷ್ಠ ಮಾಡಲು ತಮ್ಮ ತನು-ಮನ-ಧನ ಎಲ್ಲವನ್ನೂ ಸಫಲ ಮಾಡಬೇಕು. ಬಹಳ-ಬಹಳ ಮಧುರರಾಗಿ ಸೇವೆ ಮಾಡಬೇಕು. ಸತ್ಯಖಂಡವನ್ನು ಸ್ಥಾಪನೆ ಮಾಡಲು ಸತ್ಯವಾಗಿರಬೇಕು.

2. ವಿಜಯಮಾಲೆಯಲ್ಲಿ ಪೋಣಿಸಲ್ಪಡಲು ನೆನಪಿನ ಸ್ಪರ್ಧೆಯನ್ನು ಮಾಡಬೇಕು. ನಡೆಯುತ್ತಾ-ತಿರುಗಾಡುತ್ತಾ ಕಾರ್ಯ ಮಾಡುತ್ತಾ ತಂದೆ, ಶಿಕ್ಷಕ, ಸದ್ಗುರುವನ್ನು ನೆನಪು ಮಾಡಬೇಕು.

ವರದಾನ: ತ್ಯಾಗ ಮತ್ತು ತಪಸ್ಸಿನ ಸಹಯೋಗದಿಂದ ಸೇವೆಯಲ್ಲಿ ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ನಿರಂತರ ತಪಸ್ವಿಮೂರ್ತಿ ಭವ

ಸೇವಾಧಾರಿ ಅರ್ಥಾತ್ ತ್ಯಾಗ ಮತ್ತು ತಪಸ್ವಿಮೂರ್ತಿ. ತ್ಯಾಗ ಮತ್ತು ತಪಸ್ಸು ಎರಡರ ಸಹಯೋಗದಿಂದ ಸೇವೆಯಲ್ಲಿ ಸದಾ ಸಫಲತೆಯು ಸಿಗುತ್ತದೆ. ತಪಸ್ಸಿರುವುದೇ ಒಬ್ಬ ತಂದೆಯ ಹೊರತು ಮತ್ತ್ಯಾರೂ ಇಲ್ಲ, ಇದೇ ನಿರಂತರದ ತಪಸ್ಸನ್ನು ಮಾಡುತ್ತಿರುತ್ತೀರೆಂದರೆ, ತಮ್ಮ ಸೇವಾಸ್ಥಾನವು ತಪಸ್ಯಾ ಕುಂಡವಾಗಿಬಿಡುತ್ತದೆ. ಇಂತಹ ತಪಸ್ಯಾಕುಂಡವನ್ನು ಮಾಡಿರಿ, ಅದರಲ್ಲಿ ತಾನಾಗಿಯೇ ಪತಂಗಗಳು ಬರುತ್ತವೆ. ಮನಸ್ಸಾ ಸೇವೆಯಲ್ಲಿ ಶಕ್ತಿಶಾಲಿ ಆತ್ಮರು ಪ್ರತ್ಯಕ್ಷವಾಗುತ್ತಾರೆ. ಈಗ ಮನಸ್ಸಿನ ಮೂಲಕ ಧರಣಿಯ ಪರಿವರ್ತನೆಯನ್ನು ಮಾಡಿರಿ- ವೃದ್ಧಿಯನ್ನು ಮಾಡಿಕೊಳ್ಳುವ ವಿಧಿಯು ಇದೇ ಆಗಿದೆ.

ಸ್ಲೋಗನ್: ನಮ್ರತೆ ಮತ್ತು ಧೈರ್ಯತೆಯ ಶಕ್ತಿಯಿಂದ ಕ್ರೋಧಾಗಿಯನ್ನು ಶಾಂತವನ್ನಾಗಿ ಮಾಡಿಬಿಡಿ.